# “ದೇವರು ಪ್ರೀತಿಯಾಗಿದ್ದಾನೆ”

## ಎಚ್. ಎ. ಡಿಕ್ಸನ್

“ದೇವರು ಆತ್ಮನಾಗಿದ್ದಾನೆ, ಆತನನ್ನು ಆರಾಧಿಸುವವರು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಬೇಕು” (ಯೋಹಾನ 4:24) ಎಂದು ಸಮಾರ್ಯ ಸ್ತ್ರೀಗೆ ಯೇಸು ಹೇಳಿದನು. ಈ ಹೇಳಿಕೆಯಲ್ಲಿ ದೇವರು ವ್ಯಕ್ತಿಯೆಂದು ಕ್ರಿಸ್ತನು ದೃಢಪಡಿಸಿದ್ದಾನೆ. ಆತನು ಆತ್ಮನು - ಅಂದರೆ ನಿಜವಾದ ಜೀವಿಯು. ಆದರೆ ಸಂಪೂರ್ಣವಾಗಿ ಭೌತಿಕವಲ್ಲದವನು. ಆತನು ಆತ್ಮನು - ಅಂದರೆ, ಆತನ ಬಗ್ಗೆ ಸ್ಪರ್ಶ್ಯವಾದದ್ದು ಯಾವುದೂ ಇಲ್ಲ. ಆತನನ್ನು ಸ್ಪರ್ಶಿಸಲಾಗದು ಇಲ್ಲವೇ ಕಣ್ಣುಗಳಿಂದ ಆತನನ್ನು ನೋಡಲಾಗದು, ಆತನು ಆತ್ಮನು, ಆದಾಗ್ಯೂ ಆತನು ನಿಜವಾದಾತನು. ಆತನು ವೈಯಕ್ತಿಕ ದೇವರು.

“ದೇವರು ಬೆಳಕಾಗಿದ್ದಾನೆ, ಹಾಗೂ ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿರುವದಿಲ್ಲ” ಎಂದು 1 ಯೋಹಾನ 1:5ರಲ್ಲಿ ಅಪೊಸ್ತಲ ಯೋಹಾನನು ಹೇಳಿದ್ದಾನೆ. ಈ ಪ್ರೇರೇಪಿತ ಬರಹಗಾರನು ದೇವರು ಬುದ್ಧಿವಂತ ಜೀವಿಯಾಗಿದ್ದಾನೆಂಬುದನ್ನು ದೃಢಪಡಿಸಿದನು. ಆತನು ಒಂದು ಬೆಳಕಾಗಿಲ್ಲ, ಆದರೆ “ಆತನು ಬೆಳಕಾಗಿದ್ದಾನೆ.” ಬೆಳಕು ಆತನ ಸ್ವಭಾವವೇ ಆಗಿದೆ. ಇದು ತನ್ನ ವಿವೇಕ ಪಕ್ಷದ ದೈವಿಕ ತಿರುಳಾಗಿರುತ್ತದೆ. ದೇವರು “ಜ್ಯೋತಿರ್ಮಯನಾದ ತಂದೆ” ಆಗಿದ್ದಾನೆ ಎಂದು ಯಾಕೋಬನು ಘೋಷಿಸಿದ್ದಾನೆ (ಯಾಕೋಬ 1:17). ಆತನು ಬೆಳಕಿನಲ್ಲಿ ವಾಸಿಸುತ್ತಾನೆ ಎಂದು ಪೌಲನು ಹೇಳಿದನು (1 ತಿಮೊಥೆ 6:16).

1 ಯೋಹಾನ 4:8ರಲ್ಲಿ ದೇವರ ಸ್ವಭಾವದ ಬಗ್ಗೆ ಅಗಾಧವಾದ ಹೇಳಿಕೆಯನ್ನು ನಾವು ನೋಡಿದ್ದೇವೆ: “ಪ್ರೀತಿಸದವರು ದೇವರನ್ನು ತಿಳಿದಿರುವದಿಲ್ಲ, ಯಾಕಂದರೆ ದೇವರು ಪ್ರೀತಿಯಾಗಿದ್ದಾನೆ” ಬೆಳಕಿನಂತೆ ಪ್ರೀತಿಯು ಕೇವಲ ದೇವರ ಲಕ್ಷಣವಾಗಿರುವದಿಲ್ಲ. ಅದು ಆತನ ಸ್ವಭಾವವಾಗಿದೆ. “ದೇವರು ಬೆಳಕಾಗಿದ್ದಾನೆ” ಎಂಬ ಹೇಳಿಕೆಯು ದೇವರ ವಿವೇಕದ ಸ್ವಭಾವವನ್ನು ಸಾರಾಂಶಗೊಳಿಸಿದೆ, “ದೇವರು ಪ್ರೀತಿಯಾಗಿದ್ದಾನೆ” ಎಂಬುದು ಆತನ ನೈತಿಕ ಸ್ವಭಾವವನ್ನು ಸಾರಾಂಶಗೊಳಿಸುತ್ತದೆ, ದೇವರ ಬಗ್ಗೆ ಒಬ್ಬನಿಗೆ ಅನೇಕ ಸಂಗತಿಗಳ ಜ್ಞಾನವಿದ್ದರೂ, ದೇವರ ಸೌಂದರ್ಯ, ಬಲ ಮತ್ತು ನ್ಯಾಯದ ಗುಣಲಕ್ಷಣಗಳ ಬಗ್ಗೆ ಯಾವುದೇ ಜ್ಞಾನವಿಲ್ಲದಿದ್ದರೆ ಅವನಿಗೆ ದೇವರ ಮಿತಿಯುಳ್ಳ ಜ್ಞಾನವಿರುವುದು. ಅದೇ ರೀತಿಯಲ್ಲಿ ಪ್ರೀತಿಯ ತತ್ವವಿಲ್ಲದಿದ್ದರೆ ದೇವರನ್ನು ತಿಳಿಯಲಾರನು. ಪ್ರೀತಿಯು ದೇವರದಾಗಿದೆ, ಯಾಕಂದರೆ ಆತನು ಪ್ರೀತಿಯಾಗಿದ್ದಾನೆ. ಹಾಗಾದರೆ ದೇವರು ಆತ್ಮನಾಗಿದ್ದಾನೆ, ವೈಯಕ್ತಿಕ ಜೀವಿಯಾಗಿದ್ದಾನೆಣಿ ಆತನು ಬೆಳಕಾಗಿದ್ದಾನೆ, ಬುದ್ಧಿಯುಳ್ಳ ಜೀವಿಯಾಗಿದ್ದಾನೆಣಿ ಆತನು ಪ್ರೀತಿಯಾಗಿದ್ದಾನೆ, ನೈತಿಕ ಜೀವಿಯಾಗಿದ್ದಾನೆ.

ಯೋಹಾನನು ಭಾಗಶ ವಾಗಿ, ಕ್ರೈಸ್ತರಲ್ಲಿ ಒಬ್ಬರಿಗೊಬ್ಬರ ಕಡೆಗಿರುವ ಅವರ ಮನೋಭಾವನೆಯನ್ನು ಕುರಿತ ಕೆಲವು ಸುಳ್ಳು ಭಾವನೆಗಳನ್ನು ಸರಿಪಡಿಸಲು ತನ್ನ ಮೊದಲನೆಯ ಪತ್ರಿಕೆಯನ್ನು ಕ್ರೈಸ್ತರಿಗೆ ಬರೆದನು. ಪುಸ್ತಕದ ಮುಖ್ಯ ಭಾಗಗಳಲ್ಲಿ ಒಂದು ಸಹೋದರರ ಪ್ರೀತಿಯ ಪ್ರಾಮುಖ್ಯತೆಯನ್ನು ಒತ್ತಿಹೇಳುವುದಾಗಿದೆ. 1 ಯೋಹಾನ 4:7, 8ರಲ್ಲಿ, “ಪ್ರಿಯರೇ, ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ, ಪ್ರೀತಿಯು ದೇವರಿಂದಾಗಿದೆಣಿ ಮತ್ತು ಪ್ರೀತಿ ಮಾಡುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನೂ ದೇವರನ್ನು ಬಲ್ಲವನು ಆಗಿದ್ದಾನೆ. ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲಣಿ ಯಾಕಂದರೆ ದೇವರು ಪ್ರೀತಿ

ಯಾಗಿದ್ದಾನೆ" ಎಂದು ನಾವು ಓದುತ್ತೇವೆ.

ಒಬ್ಬರಿಗಾಗಿ ಇನ್ನೊಬ್ಬರ ಪ್ರೀತಿಯು ಸ್ಪಷ್ಟವಾಗಿ ಕ್ರೈಸ್ತನದಾಗಿರುತ್ತದೆ. ಅದಿರುವಲ್ಲಿ ಮಾತ್ರವೇ ಒಬ್ಬನು ದೇವರ ಮಗುವಾಗಿರುವನೆಂಬುದಕ್ಕೆ ಪುರಾವೆಯಿರುತ್ತದೆ. "ಪ್ರೀತಿಸುವ ಪ್ರತಿಯೊಬ್ಬನೂ ದೇವರಿಂದ ಹುಟ್ಟಿದವನಾಗಿರುವನು ಮತ್ತು ದೇವರನ್ನು ತಿಳಿದವನಾಗಿರುವನು." ಪ್ರೀತಿಯಿಲ್ಲದೇ ಒಬ್ಬನಿಗೆ ಪುತ್ರತ್ವದ ಸ್ವಭಾವವನ್ನು ಹಂಚಿಕೊಳ್ಳುವ ಹಕ್ಕು ಇರುವುದಿಲ್ಲ, ದೇವರ ಆತ್ಮಿಕ ಮಗುವು ತನ್ನ ಆತ್ಮಿಕ ತಂದೆಯ ಸ್ವಭಾವದಲ್ಲಿ ಪಾಲುಗಾರನಾಗುವನು. ತಂದೆಯು ಪ್ರೀತಿಯಾಗಿದ್ದಾನೆ, ಹಾಗೂ ಆತನವನೆಂದು ಹೇಳಿಕೊಳ್ಳುವ ಯಾರೇ ಆಗಲಿ ಆ ಪ್ರೀತಿಯಲ್ಲಿ ಪಾಲುಗಾರರಾಗಿರಬೇಕು. ಅದು ದೇವರ ಭಾಗವಾಗಿರುವಂತೆ ಅವನ ಭಾಗವೂ ಆಗಿರಬೇಕು.

## ಮಾನವನಿಗೆ ತೋರಿಸಲ್ಪಟ್ಟ ದೇವರ ಪ್ರೀತಿ

ದೇವರನ್ನು ಸಂಪೂರ್ಣವಾಗಿ ಗ್ರಹಿಸಿಕೊಳ್ಳಲು ಮನುಷ್ಯನ ಮನಸ್ಸು ಎಂದೂ ಶಕ್ತವಾಗಿರುವದಿಲ್ಲ. ಅವನ ಕಣ್ಣುಗಳು ದೇವರನ್ನು ನೋಡಲಾರವು. ಅವನ ಹಸ್ತಗಳು ದೇವರನ್ನು ಮುಟ್ಟಲಾರವು. ಅವನ ಮನಸ್ಸು ದೇವರನ್ನು ಪರಿಶೋಧಿಸಲಾರದು. ದೇವರು ಮನುಷ್ಯನಿಗೆ ತನ್ನ ಸ್ವಭಾವವನ್ನೂ ಗುಣಲಕ್ಷಣಗಳನ್ನೂ ಪ್ರಕಟಿಸಿರುವನು. ಆದಾಗ್ಯೂ ಇವುಗಳಲ್ಲಿ ಯಾವುದನ್ನೂ ಮರ್ತ್ಯ ಮಾನವನ ಮಾತುಗಳಿಂದ ಇಲ್ಲವೇ ಬರಹಗಳಿಂದ ಪೂರ್ಣವಾಗಿ ವಿವರಿಸಲಿಕ್ಕಾಗುವದಿಲ್ಲ. ಈ ಸಂಗತಿಯಿಂದ ಪ್ರಭಾವಿತನಾಗಿ ಒಬ್ಬ ಕವಿಯು ಈ ಸಾಲುಗಳನ್ನು ಬರೆದಿದ್ದಾನೆ:

> ಸಾಗರವನ್ನು ಮಸಿಯಿಂದ ತುಂಬಿರಿ,
> ಪ್ರತಿಯೊಂದು ಹುಲ್ಲು ಕಡ್ಡಿಯನ್ನು ಲೇಖನಿಯನ್ನಾಗಿ ಮಾಡಿ,
> ಜಗತ್ತನ್ನು ಚರ್ಮದ ಕಾಗಿದವನ್ನಾಗಿ ಮಾಡಿ,
> ವೃತ್ತಿಯಿಂದ ಮನುಷ್ಯನನ್ನು ಲೇಖಕನನ್ನಾಗಿ ಮಾಡಿ,
> ಮೇಲಿನ ದೇವರ ಪ್ರೀತಿಯನ್ನು ಬರೆಯಲು,
> ಸಾಗರವು ಖಾಲಿಯಾಗಿ ಬರಿದಾಗುವುದು:
> ಆಗಸದಿಂದ ಆಗಸಕ್ಕೆ ವಿಶಾಲವಾಗಿ ಹರಡಿದ್ದರೂ
> ಸುರುಳಿಯು ಎಲ್ಲವನ್ನೂ ಒಳಗೊಂಡಿರಲಾರದು.[1]

ಮಿತಿಯುಳ್ಳ ಮನುಷ್ಯನು ದೇವರ ಅನಂತವಾದ ಮನಸ್ಸನ್ನೂ ಗುಣವನ್ನೂ ಗ್ರಹಿಸಿಕೊಳ್ಳಲಾರನು. ಆಗ ಮಾನವನು ದೇವರ ವಾಸ್ತವಿಕವನ್ನೂ ಸ್ವಭಾವವನ್ನೂ ತಿಳಿದುಕೊಳ್ಳುವದಕ್ಕಾಗಿ ದೈವಿಕ ಪ್ರಕಟಣೆಗಳ ಮೇಲೆ ಆಶ್ರಯಿಸಬೇಕು. "ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ ...." (ರೋಮಾಪುರ 1:20) ಎಂದು ಪೌಲನೊಂದಿಗೆ ನಾವು ಹೇಳುವುದು ಯೋಗ್ಯವಾಗಿದೆ. ಈ ಹೇಳಿಕೆಗೆ ದೇವರ ದೈವತ್ವಕ್ಕೆ ಮತ್ತು ಬಲಕ್ಕೆ ಪ್ರತ್ಯೇಕವಾಗಿ ಉಲ್ಲೇಖವಿದೆ ಆದರೆ ಇದು ಆತನ ಪ್ರೀತಿಯನ್ನೂ ಕುರಿತ ಸತ್ಯವಾಗಿದೆ. ಆತನ ಪ್ರೀತಿಯನ್ನು ನಾವು ನೋಡಲಾರೆವು, ಆದರೆ ಮನುಷ್ಯನ ಕಡೆಗಿರುವ ಆತನ ದೈವಿಕ ಸಹಾನುಭೂತಿ, ದಯೆ, ಕರುಣೆಗಳ ಮುಖಾಂತರ ನಾವು ಅದನ್ನು ಕಲಿತುಕೊಳ್ಳಬಹುದು.

ಸೃಷ್ಟಿಯ ಎಲ್ಲಾ ಕಾರ್ಯದಲ್ಲಿ ಮನುಷ್ಯನ ಕಡೆಗೆ ತನ್ನ ಪ್ರೀತಿಯನ್ನು ದೇವರು ಪ್ರಕಟಿಸಿದ್ದಾನೆ. ಜನರ ನಿವಾಸಕ್ಕಾಗಿ ಜಗತ್ತನ್ನು ದೇವರು ಸೃಷ್ಟಿಸಿದನು ಎಂದು

ಪ್ರವಾದಿ ಯೆಶಾಯನು ಹೇಳಿದ್ದಾನೆ (ಯೆಶಾಯ 45:18). ತನ್ನ ಪ್ರೀತಿಯ ಗುರಿಯಾಗಿರುವ ಮಾನವರ ವಸತಿಗಾಗಿ ದೇವರು ಪ್ರಾಥಮಿಕವಾಗಿ ಜಗತ್ತನ್ನು ಉಂಟು ಮಾಡಿದನೆಂದು ಅರ್ಥಕೊಡುವುದು ಸರಿಯಾದ ವ್ಯಾಖ್ಯಾನಾವಾಗಿದೆ. ದೇವದೂತರಿಗಿಂತಲೂ ಸ್ವಲ್ಪ ಕೆಳಗಿನವನಾಗಿ ತಾನು ಮಾಡಿದ ಮಾನವನನ್ನು ದೇವರು ಸಂದರ್ಶಿಸಿದನು (ಇಬ್ರಿಯ 2:6, 7).

ಈ ವಾಸಸ್ಥಳದಲ್ಲಿ, ಪ್ರೀತಿಯ ದೇವರು ಮಾನವ ಅಸ್ತಿತ್ವಕ್ಕೆ ಅವಶ್ಯವಾಗಿರುವ ಜೀವನದ ಎಲ್ಲಾ ರೂಪಗಳನ್ನು ಒದಗಿಸಿದನು. ಆತನು ಅವನಿಗೆ ಸರಿಹೋಲುವ ಮತ್ತು ಅವನ ಅಗತ್ಯತೆಗಳಿಗೆ ಪೂರಕವಾದ ಸಹಾಯಗಳನ್ನು ಉಂಟುಮಾಡಿದನು. ಮಾನವರಲ್ಲಿ ತಿಳಿಯಲ್ಪಟ್ಟ ನಿಕಟವಾದ ಬಂಧನದಲ್ಲಿ ಅಂದರೆ ತನ್ನ ಹೆಂಡತಿಗಾಗಿ ಪುರುಷನಲ್ಲಿರುವ ಪ್ರೀತಿಯಲ್ಲಿ ಆತನು ಪುರುಷನನ್ನು ಅವನ ಸಹಾಯಗಳೊಂದಿಗೆ ಒಂದುಗೂಡಿಸಿದನು. ಈ ಸಂಬಂಧವು ಮನುಷ್ಯನಿಗೆ ಪ್ರಿಯರೊಂದಿಗೆ ಮನೆಯನ್ನು ಒದಗಿಸಿತು ಹಾಗೂ ಯುಗಗಳ ಮುಖಾಂತರವಾಗಿ ನಿಜವಾದ ಪ್ರೀತಿಯನ್ನು ಕೊಡುವ ಮತ್ತು ಕಾಪಾಡುವ ತಳಹದಿಯನ್ನು ಅದು ರೂಪಿಸಿತು. ದೇವರ ನಿಜವಾದ ಮಗುವಿನ ಮನೆಯನ್ನು ತುಂಬಿಸುವದರಲ್ಲಿ ಪ್ರೀತಿಗಿಂತ ಹೆಚ್ಚು ಸಿಹಿಯಾದ ಪ್ರೀತಿಯ ಪ್ರಕಟನೆಯನ್ನು ಮನುಷ್ಯನು ತಿಳಿದಿರುವದಿಲ್ಲ.

ಭೌತಿಕ ವಿಶ್ವದ ತನ್ನ ಸೃಷ್ಟಿಯ ಕಾರ್ಯದಲ್ಲಿ ದೇವರ ಪ್ರೀತಿಯು ಪ್ರತಿಬಿಂಬಿಸಲ್ಪಟ್ಟಿದೆ. ಆತನು ಮನುಷ್ಯನನ್ನು ಏದೆನ್ ತೋಟದ ಆದರ್ಶವಾದ ಪರಿಸರದಲ್ಲಿ ಇಟ್ಟನು. ಮನುಷ್ಯನು ಪಾಪಮಾಡಿದ ನಂತರವೂ ತೋಟದಿಂದ ಹೊರಗೆ ದೊಬ್ಬಲ್ಪಟ್ಟ ನಂತರವೂ ದೇವರು ತನ್ನ ಪ್ರೀತಿಯನ್ನು ಪ್ರತ್ಯಕ್ಷಪಡಿಸಿದನು. ಭೂಮಿಯು ಶಪಿಸಲ್ಪಟ್ಟರೂ ಮನುಷ್ಯನು ಶ್ರಮೆ ಪಟ್ಟು ದುಡಿಯಲು ಒತ್ತಾಯಿಸಲ್ಪಟ್ಟರೂ, ದೇವರು ಅವನಿಗೆ ಫಲಕಾರಿಯಾದ ಋತುಗಳನ್ನು ಒದಗಿಸಿದನು ಹಾಗೂ ಸಮಯವು ತೀರುವ ತನಕ ಬಿತ್ತುವ ಕಾಲವನ್ನೂ ಸುಗ್ಗಿಯ ಕಾಲವನ್ನೂ ಒದಗಿಸಿ ಕೊಟ್ಟನು.

ಸಮಸ್ಯೆಗಳಿರುವ ಈ ಲೋಕದಲ್ಲಿ ಮನುಷ್ಯನೊಬ್ಬನೆ ಎಂದೂ ತನ್ನ ಮಾರ್ಗವನ್ನು ಕಂಡುಕೊಳ್ಳಲು ಶಕ್ತನಾಗಿಲ್ಲ. ಸಮಸ್ಯೆಗಳ ಪರಿಹಾರಗಳು ಅವನೊಳಗೆ ಇರುವದಿಲ್ಲ. ಪುನ  ದೇವರು ಮನುಷ್ಯನಿಗೆ ಬೋಧನೆ ಕೊಡುವದರಿಂದ ತನ್ನ ಪ್ರೀತಿಯನ್ನು ತೋರಿಸಿದನು. ಅನೇಕ ಸಂದೇಶವಾಹಕರ ಮುಖಾಂತರ ದೇವರು ತನ್ನನ್ನು ಪ್ರಕಟಿಸಿದನು. ಕತ್ತಲೆಯನ್ನು ಓಡಿಸಲು ಮತ್ತು ಮನುಷ್ಯನಿಗೆ ಮಾರ್ಗದರ್ಶನ ಮಾಡಲು ಆತನು ಬೆಳಕನ್ನು ಕೊಟ್ಟನು. ಆ ಆಲೋಚನೆಯೂ ಬೋಧನೆಯೂ "ಪುಸ್ತಕಗಳ ಪುಸ್ತಕವನ್ನು" ಮಾಡಿದವು. ಬೈಬಲು ದೇವರು ಪ್ರೀತಿಯಾಗಿದ್ದಾನೆ ಎಂಬುದಕ್ಕೆ ಪುರಾವೆಯಾಗಿದೆ.

ದೇವರ ಪ್ರೀತಿಯ ಅತಿ ದೊಡ್ಡ ರುಜುವಾತು ಮನುಷ್ಯನ ಪಾಪಗಳಿಗಾಗಿ ಆತನು ಪರಿಹಾರ ಒದಗಿಸಿದ ಸಂಗತಿಯಾಗಿದೆ. ಬೈಬಲಿನ "ಸುವರ್ಣಪಾಠ" ಎಂದು ಯೋಹಾನ 3:16 ವರ್ಣಿಸಲ್ಪಟ್ಟಿದೆ. ಅದು ಯೋಗ್ಯವಾದ ವಿವರಣೆ, ಯಾಕಂದರೆ ಆ ವಾಕ್ಯಭಾಗವು ದೇವರ ಪ್ರೀತಿಯ ವಿಶಾಲತೆಯ ಸಾರಾಂಶವಾಗಿದೆ. ನಮ್ಮ ಬದಲಾಗಿ ಸಾಯುವಂತೆ ತನ್ನ ಕುಮಾರನನ್ನು ಕೊಡುವಷ್ಟು ಆತನು ಲೋಕವನ್ನು ಪ್ರೀತಿಸಿದನು. "ಅತನು ನಮಗಾಗಿ ತನ್ನ ಪ್ರಾಣವನ್ನು ಅರ್ಪಿಸಿದ್ದರಲ್ಲಿ ಪ್ರೀತಿ ಎಂಥದೆಂಬುದನ್ನು ತಿಳಿದು ಕೊಂಡಿದ್ದೇವೆ" (1 ಯೋಹಾನ 3:16ಎ) ಎಂದು ಯೋಹಾನನು ಹೇಳಿದ್ದಾನೆ. ಕಲ್ವಾರಿಯ ಸಿಲುಬೆಯು ಮಾನವರ ಕಡೆಗಿರುವ ದೇವರ ಪ್ರೀತಿಯ ನಾಲ್ಕು ವಿಸ್ತೀರ್ಣಗಳನ್ನು ಬಹಳ ಸ್ಪಷ್ಟವಾಗಿ ನಾವು ನೋಡುತ್ತೇವೆ. ಅದು ನಮ್ಮ ಆತ್ಮಗಳಿಗಾಗಿರುವ ಆತನ ಲಕ್ಷ್ಯದ (ಅಕ್ಕರೆಯ) ಉದ್ದ, ಅಗಲ, ಎತ್ತರ ಮತ್ತು ಆಳವನ್ನು ತೋರಿಸುತ್ತದೆ.

ಭೂಲೋಕದಲ್ಲಿಯ ದೇವರ ಕುಟುಂಬದಲ್ಲಿಯ ಅನ್ಯೋನ್ಯತೆಯೂ ಆನಂದವೂ

ದೇವರ ಪ್ರೀತಿಯ ಇನ್ನೊಂದು ಪ್ರತಿಬಿಂಬವಾಗಿದೆ. ಈ ಅನ್ಯೋನ್ಯತೆಯು ದೇವರ ಸಭೆಯಾಗಿ ರಚಿಸಲ್ಪಟ್ಟವರೆಲ್ಲರ ಭಾಗ್ಯವಾಗಿದೆ. ಅದರಲ್ಲಿ ಆತನ ಜನರು ಆತನ ಎಲ್ಲಾ ಆಶೀರ್ವಾದಗಳಲ್ಲಿ ಪಾಲುಗಾರರಾಗುತ್ತಾರೆ. ಆತನು ಸಭೆಯನ್ನು ಪ್ರೀತಿಸಿ, ಅದು ಸಾಧ್ಯವಾಗುವಂತೆ ಮಾಡಲು ತನ್ನ ಕುಮಾರನನ್ನು ಕೊಟ್ಟನು. ಆ ಕುಮಾರನು ಸಭೆಯನ್ನು ಪ್ರೀತಿ ಮಾಡಿದನು ಹಾಗೂ ಅದನ್ನು ದೇವರ ಆತ್ಮನಿವಾಸಕ್ಕೆ ಯೋಗ್ಯವಾದ ಸ್ಥಳವಾಗುವಂತೆ ಮಾಡಲು ಅದನ್ನು ಶುದ್ಧೀಕರಿಸಿ ಪ್ರತಿಷ್ಠಿಸುವದಕ್ಕಾಗಿ ತನ್ನನ್ನು ಕೊಟ್ಟನು.

ದೇವರ ಪ್ರೀತಿಯ ಅಂತಿಮ ಕೊಡುಗೆಯಂತೆ ಸಮಾಧಿಯನ್ನು ದಾಟಿ ಜೀವದ ನಿರೀಕ್ಷೆಯ ಕಡೆಗೆ ಗಮನವನ್ನು ಹರಿಸುವೆವು. ಪ್ರೀತಿಸುವ ತಂದೆಯ ವಾಗ್ದಾನದಿಂದ ಇದು ಮನುಷ್ಯನಲ್ಲಿ ಪ್ರೇರೇಪಿಸಲ್ಪಟ್ಟಿತು ಮತ್ತು ನೀತಿವಂತನಾಗಿ ಜೀವಿಸಲಿಕ್ಕೆ ಮನುಷ್ಯನಿಗೆ ಪ್ರೇರಣೆಯಾಗಿದೆ. ಜೀವನವು ನಿತ್ಯತ್ವಕ್ಕೆ ಕೇವಲ ಒಂದು ಸೋಪಾನವಾಗಿದೆ ಎಂಬ ನಂಬಿಕೆಯು, ನಿತ್ಯ ಮಹಿಮೆಯ ಪರದೈಸದೊಳಗೆ ಪರದೆಯನ್ನು ತೂರಿಕೊಂಡು ಹೋಗುವುದು, ಮನುಷ್ಯನಲ್ಲಿ ದೇವರು ಬಯಸುವಂತೆ ಜೀವಿಸಲು ಬಲವಾದ ಅಪೇಕ್ಷೆಯನ್ನು ಪ್ರೋತ್ಸಾಹಿಸುತ್ತದೆ. ಈ ನಿರೀಕ್ಷೆಯು ದೇಹ ಇಲ್ಲವೇ ಮನಸ್ಸಿನ ಹಿಂಸೆಯನ್ನು ಸಹಿಸಲು ಮತ್ತು ಜೀವನದಲ್ಲಿ ಕಷ್ಟಕೊಡುವ ಸಮಸ್ಯೆಗಳನ್ನು ಸಹಿಸಲು ಶಕ್ತರನ್ನಾಗಿ ಮಾಡುತ್ತದೆ. ಈ ನಿರೀಕ್ಷೆಯು ಜೀವನಕ್ಕೂ ದೇವಭಕ್ತಿಗೂ ಸಂಬಂಧಿಸಿದ ಎಲ್ಲಾ ಆಶೀರ್ವಾದಗಳನ್ನು ದೇವರು ಪ್ರೀತಿಯಲ್ಲಿ ಒದಗಿಸುವನೆಂಬ ಸಂಗತಿಯ ಇನ್ನೊಂದು ಪ್ರದರ್ಶನವಾಗಿದೆ.

## ದೇವರ ಪ್ರೀತಿಗೆ ಮನುಷ್ಯನ ಪ್ರತ್ಯುತ್ತರ

ಮನುಷ್ಯನಿಂದ ಪ್ರೀತಿಯ ಪ್ರತಿಕ್ರಿಯೆ ಪಡೆದುಕೊಳ್ಳಲು ದೇವರು ಮನುಷ್ಯನ ಕಡೆಗೆ ತನ್ನ ಪ್ರೀತಿಯನ್ನು ಸುರಿಸಿದನು. "ಆತನು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" (1 ಯೋಹನ 4:19) ಎಂದು ಯೋಹಾನನು ಹೇಳಿದ್ದಾನೆ. ಆತನನ್ನು ಪ್ರೀತಿಸಲು ಆತನು ಪ್ರೀತಿಸುವವರನ್ನು ನಾವು ಪ್ರೀತಿಸಬೇಕು. ದೇವರ ಜನರ ಕಡೆಗೆ ಕೆಟ್ಟದ್ದನ್ನು, ಪ್ರತೀಕಾರವನ್ನು ಇಟ್ಟುಕೊಂಡಿರುವಾಗ ನಾವು ದೇವರನ್ನು ಪ್ರೀತಿಸುತ್ತೇವೆ ಎಂದು ಯೋಚಿಸುವುದು ಅತಿಯಾದ ತಪ್ಪು ತಿಳುವಳಿಕೆಯಾಗಿದೆ. ಅಪೊಸ್ತಲ ಪೌಲನ ಭಾಷೆಯಲ್ಲಿ ಇತರರನ್ನು "ತನಗಿಂತಲೂ ಶ್ರೇಷ್ಠನೆಂದು" (ಫಿಲಿಪ್ಪಿ 2:3) ತಿಳಿಯುವದರಿಂದ ಪ್ರತಿಯೊಬ್ಬ ಕ್ರೈಸ್ತನು ದೇವರ ಜನರಿಗೆ ತನ್ನ ಪ್ರೀತಿಯನ್ನು ತೋರಿಸಬೇಕು.

ಪ್ರೀತಿಯು ಸೇವೆಯಲ್ಲಿ ಕಾರ್ಯರೂಪಕ್ಕೆ ತರಲ್ಪಡಬೇಕು. ಪ್ರೀತಿಯ ಮುಖಾಂತರ ಕಾರ್ಯ ಮಾಡುವ ನಂಬಿಕೆಯು ಮಾತ್ರವೇ ದೇವರ ದೃಷ್ಟಿಯಲ್ಲಿ ಪರಿಣಾಮಕಾರಿಯಾದ ವಿಶ್ವಾಸವಾಗಿದೆ. "ನೀವು ನನ್ನನ್ನು ಪ್ರೀತಿಸಿದರೆ, ನೀವು ನನ್ನ ಆಜ್ಞೆಗಳನ್ನು ಕೈಕೊಳ್ಳುವಿರಿ" (ಯೋಹಾನ 14:15). ಆದುದರಿಂದ, ಸೇವೆಯನ್ನು ಪ್ರೀತಿಯಿಂದ ಬೇರೆ ಮಾಡಲಿಕ್ಕಾಗುವದಿಲ್ಲ. ದೇವರ ಜನರಿಗಾಗಿರುವ ಪ್ರೀತಿಯು ಸೇವೆಯಲ್ಲಿ ಪ್ರಕಟಿಸಲ್ಪಡಬೇಕು. ಜನರ ಆತ್ಮಗಳನ್ನು ನಾವು ಪ್ರೀತಿಸತಕ್ಕದ್ದು. ಅವರ ರಕ್ಷಣೆಗಾಗಿ ಹುಡುಕತಕ್ಕದ್ದು. ಅದೇ ಸಮಯದಲ್ಲಿ ಅವರ ಸೇವೆ ಮಾಡಬೇಕು. ಅವರ ದೈಹಿಕ ಅಗತ್ಯತೆಗಳಿಗೆ ನಮ್ಮ ಕಿವಿಗಳನ್ನೂ ಕಣ್ಣುಗಳನ್ನೂ ಮುಚ್ಚಿಕೊಂಡರೆ ಕೆಲವು ಆತ್ಮಗಳನ್ನು ಮಾತ್ರವೇ ಆತ್ಮಿಕ ಆಹಾರದಲ್ಲಿ ಆಸಕ್ತರನ್ನಾಗಿ ಮಾಡಬಹುದು. ಯೇಸು ಒಳ್ಳೆದನ್ನು ಮಾಡುತ್ತಾ ಹೋದನು. ಆತನು ಪ್ರೀತಿಸಿದಂತೆ ಪ್ರೀತಿಸುವವರು ಆತನ ಉದಾಹರಣೆಯನ್ನು ಅನುಸರಿಸಬೇಕು.

ದೇವರ ಪ್ರೀತಿಯ ಗುಣಲಕ್ಷಣವು 1 ಕೊರಿಂಥ 13ರಲ್ಲಿಯ ಪರಿಚಿತ ವಚನಗಳಲ್ಲಿ ಪೌಲನಿಂದ ಮುಂದಿಡಲ್ಪಟ್ಟಿದೆ. ದೇವರ ಸೇವಕನು ಹೀಗೆ ಹೇಳಿದನು:

ಪ್ರೀತಿಯು ಬಹು ತಾಳ್ಮೆಯುಳ್ಳದ್ದು, ಪ್ರೀತಿಯು ದಯೆ ತೋರಿಸುವುದು, ಪ್ರೀತಿಯು ಹೊಟ್ಟೆಕಿಚ್ಚು ಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲಣಿ ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲಣಿ ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆಣಿ ಎಲ್ಲವನ್ನು ಸಹಿಸಿ ಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ತಾಳಿಕೊಳ್ಳುತ್ತದೆ (ವಚನಗಳು 4-7).

ಪ್ರೀತಿಯ ಲಕ್ಷಣವನ್ನು ಈ ವಾಕ್ಯ ಭಾಗವು ಚಿತ್ರಿಸುತ್ತದಲ್ಲದೇ - ದೇವರು ಪ್ರೀತಿ ಸ್ವರೂಪನಾಗಿದ್ದುದರಿಂದ - ಅದು ದೇವರ ವಿವರಣೆಯೂ ಸಹ ಆಗಿದೆ. "ಪ್ರೀತಿ" ಎಂಬ ಪದಕ್ಕೆ ಬದಲಾಗಿ "ದೇವರು" ಎಂಬುದನ್ನು ಇಟ್ಟು ಪುನ ಓದಲಿಕ್ಕೆ ವಾಕ್ಯ ಭಾಗವು ಯೋಗ್ಯವಾಗಿದೆ:

ದೇವರು ಬಹಳ ತಾಳ್ಮೆಯುಳ್ಳವನು, ದೇವರು ದಯೆ ತೋರಿಸುವವನು. ದೇವರು ಹೊಟ್ಟೆ ಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲಣಿ ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲು ಇಟ್ಟುಕೊಳ್ಳುವದಿಲ್ಲಣಿ ಅನ್ಯಾಯವನ್ನು ನೋಡಿ ಸಂತೋಷಪಡದೇ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತಾನೆಣಿ ಎಲ್ಲವನ್ನೂ ಸಹಿಸಿಕೊಳ್ಳುತ್ತಾನೆ, ಎಲ್ಲವನ್ನೂ ನಂಬುತ್ತಾನೆ, ಎಲ್ಲವನ್ನೂ ನಿರೀಕ್ಷಿ ಸುತ್ತಾನೆ, ಎಲ್ಲವನ್ನೂ ತಾಳಿಕೊಳ್ಳುತ್ತಾನೆ.

ದೇವರ ಮಗುವು ದೇವರ ಗುಣವನ್ನೂ ಸ್ವಭಾವವನ್ನೂ ಹೊಂದಿಕೊಳ್ಳಬೇಕಾಗಿರುವದರಿಂದ ಪರಿಶುದ್ಧ ಬರಹದ ಈ ವಾಕ್ಯ ಭಾಗದಲ್ಲಿ ತನ್ನ ಹೆಸರನ್ನು ಇಡುವದಕ್ಕೆ ಶಕ್ತನಾಗಿರುವುದು ಸ್ಪಷ್ಟವಾಗುತ್ತದೆ. ಈ ರೀತಿಯಲ್ಲಿ ಪುನ ಅದನ್ನು ಓದೋಣ:

ಒಬ್ಬ ಕ್ರೈಸ್ತನು ಬಹಳ ತಾಳ್ಮೆಯುಳ್ಳವನು, ಒಬ್ಬ ಕ್ರೈಸ್ತನು ದಯೆತೋರಿಸುವವನು, ಒಬ್ಬಕ್ರೈಸ್ತನುಹೊಟ್ಟೆಕಿಚ್ಚುಪಡುವದಿಲ್ಲ,ಹೊಗಳಿಕೊಳ್ಳುವದಿಲ್ಲ,ಉಬ್ಬಿಕೊಳ್ಳುವದಿಲ್ಲಣಿ ಮರ್ಯಾದೆಗೆಟ್ಟು ನಡೆಯುವುದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ. ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲಣಿ ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತಾನೆಣಿ ಎಲ್ಲವನ್ನೂ ಸಹಿಸಿ ಕೊಳ್ಳುತ್ತಾನೆ, ಎಲ್ಲವನ್ನೂ ನಂಬುತ್ತಾನೆ, ಎಲ್ಲವನ್ನೂ ನಿರೀಕ್ಷಿಸುತ್ತಾನೆ, ಎಲ್ಲವನ್ನೂ ತಾಳಿಕೊಳ್ಳುತ್ತಾನೆ.

ಕೊನೆಯದಾಗಿ, ನಮ್ಮಲ್ಲಿ ಪ್ರತಿಯೊಬ್ಬನು ತನ್ನನ್ನು ಬದಲಾಗಿ ಇಟ್ಟುಕೊಂಡು ಇನ್ನೊಮ್ಮೆ ಇದನ್ನು ಓದೋಣ:

ನಾನು ಬಹಳ ತಾಳ್ಮೆಯುಳ್ಳವನು, ನಾನು ದಯೆತೋರಿಸುವವನು. ನಾನು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಉಬ್ಬಿ ಕೊಳ್ಳುವದಿಲ್ಲಣಿ ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟು ಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲಣಿ ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷ ಪಡುತ್ತೇನೆಣಿ ಎಲ್ಲವನ್ನೂ ಸಹಿಸಿಕೊಳ್ಳುತ್ತೇನೆ, ಎಲ್ಲವನ್ನೂ ನಂಬುತ್ತೇನೆ,

ಎಲ್ಲವನ್ನೂ ನಿರೀಕ್ಷಿಸುತ್ತೇನೆ, ಎಲ್ಲವನ್ನೂ ತಾಳಿಕೊಳ್ಳುತ್ತೇನೆ.

ಯಾರೂ ತನ್ನ ಸ್ವಂತದ ಪರವಾಗಿ ಇಂಥ ಘೋಷಣೆ ಮಾಡಲು ಪೂರ್ಣ ಯೋಗ್ಯರಾಗಿದ್ದೇವೆಂದು ಭಾವಿಸುವದಿಲ್ಲ. ಆದಾಗ್ಯೂ ಇದು ಶಿಷ್ಯತ್ವದ ನಿಜವಾದ ಪರೀಕ್ಷೆಯಾಗಿದೆ. ನೀವು ನಿಜವಾಗಿಯೂ ದೇವರನ್ನು ತಿಳಿದಿರುವಿರೋ? ದೇವರ ಸ್ವಭಾವವನ್ನು ನಾವು ಹೊಂದಿಕೊಂಡಿದ್ದೇವೆ ಎಂದು ಹೇಳಲು ನಾವು ಶಕ್ತರಾಗಿರುವೆವೋ? ನಾವು ಉತ್ತರ ಕೊಡುವಂತೆ, "ಪ್ರೀತಿಸದೇ ಇರುವವನು ದೇವರನ್ನು ತಿಳಿದಿರುವದಿಲ್ಲ, ಯಾಕಂದರೆ ದೇವರು ಪ್ರೀತಿಯಾಗಿದ್ದಾನೆ" (1 ಯೋಹಾನ 4:8)ಣಿ "ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಇದರಿಂದ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದುಕೊಳ್ಳುವರು" (ಯೋಹಾನ 13:35) ಎಂದು ಆತನು ಹೇಗೆ ಹೇಳಿದನೆಂಬುದನ್ನು ಜ್ಞಾಪಿಸಿಕೊಳ್ಳೋಣ.

ಪ್ರೀತಿಯ ಬಗ್ಗೆ ಪೌಲನ ವಿವರಣೆಯನ್ನು ನಾವು ಯೋಚಿಸುತ್ತಿರುವಂತೆ, ಮನುಷ್ಯನ ಸ್ವಾರ್ಥದ ಸ್ವಭಾವದ ಬಗ್ಗೆ ನಾವು ಗಮನಿಸುತ್ತೇವೆ. ಅವನು ತಾನೇ ಸರ್ವಸಂತೃಪ್ತನೆಂದು ಭಾವಿಸುವುದಕ್ಕೆ ಆತನು ಎಂತಾ ತತ್ವವನ್ನು ಉಳ್ಳವನಾಗಿದ್ದಾನೋ ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳುತ್ತೇವೆ. ತನ್ನ ಕಣ್ಣಿನಲ್ಲಿರುವ ದೂಲವನ್ನು ನೋಡಿಕೊಳ್ಳದೇ ತನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಹೇಗೆ ನೋಡುವನು ಎಂಬುದನ್ನು ಜ್ಞಾಪಿಸಿಕೊಳ್ಳಿರಿ (ನೋಡಿರಿ ಮತ್ತಾಯ 7:3, 4ಣಿ KJV).

ಪ್ರೀತಿಯಿಲ್ಲದೇ ಯಾವುದೇ ಸಂಗತಿಯನ್ನು ದೇವರು ಮೆಚ್ಚುವದಿಲ್ಲ ಎಂಬುದನ್ನು ನಮ್ಮ ಬೋಧನೆಯಲ್ಲಿ ಒತ್ತಿ ಹೇಳುವಲ್ಲಿ ಸೋತುಹೋಗಿದ್ದೇವೆಯೋ? ದೇವರ ಜನರಿಗೆ ವಿಶೇಷ ಅದ್ಭುತಗಳ ಶಕ್ತಿಗಳು ಕೊಡಲ್ಪಟ್ಟಾಗ, ಪ್ರೀತಿಯಿಲ್ಲದೇ ಇರುವಂಥದ್ದು, ಆತನ ಮುಂದೆ ಅವುಗಳ ಪರಿಣಾಮಗಳು ವ್ಯರ್ಥವಾಗಿ ಹೋಗಿವೆ (1 ಕೊರಿಂಥ 13:1, 2). ಆ ವರಗಳು ದೇವರ ಉದ್ದೇಶವನ್ನು ನೆರವೇರಿಸಿದವು ಹಾಗೂ ಆಮೇಲೆ ಅವು ಹಿಂತೆಗೆದು ಕೊಳ್ಳಲ್ಪಟ್ಟವು. ಈಗ ನಂಬಿಕೆ, ನಿರೀಕ್ಷೆ ಮತ್ತು ಪ್ರೀತಿ ಮಾತ್ರವೇ ಉಳಿದಿರುತ್ತವೆ. "ಇವುಗಳಲ್ಲಿ ಶ್ರೇಷ್ಠವಾದದ್ದು ಪ್ರೀತಿಯೇ" ಎಂದು ಪೌಲನು ಹೇಳಿದನು (1 ಕೊರಿಂಥ 13:13). ಆ ಗುಣವು ಒಬ್ಬನ ನಂಬಿಕೆ ಮತ್ತು ನಿರೀಕ್ಷೆಗೆ ಅರ್ಥವನ್ನೂ ಬೆಲೆಯನ್ನೂ ಕೊಡುತ್ತದೆ. ಆ ಗುಣದಿಂದ ನಾವು ದೇವರವರು ಆಗಿರುವೆವೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುತ್ತೇವೆ. ನಾವು ಆಚೆಯಿರುವ ನಾಡಿನಲ್ಲಿ ಆತನ ಸನ್ನಿಧಿಯೊಳಗೆ ಬರುವಾಗ, ಅದರಿಂದ ನಾವು ನಿಜವಾಗಿಯೂ ಆತನವರು ಆಗಿರುವೆವೋ ಇಲ್ಲವೋ ಎಂಬುದನ್ನು ತಿಳಿದು ಕೊಳ್ಳುತ್ತೇವೆ.

---

ಟಿಪ್ಪಣಿ

[1]Frederick Martin Lehman, "The Love of God," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1996).

ಈ ಪಾಠವು ಅಬಿಲೆನೆ ಕ್ರಿಸ್ಟಿಯನ್ ಕಾಲೇಜ್ ಭಾಷಣಗಳ, 1958 ಪುನರ್ ಮುದ್ರಣವಾಗಿದೆ. ಅಬಿಲೆನೆ ಕ್ರಿಶ್ಚಿಯನ್ ಯೂನಿವರ್ಸಿಟಿ ಲೆಕ್ಚರ್‌ಶಿಪ್ ಡೈರೆಕ್ಟರ್ ಅವರ ಅಪ್ಪಣೆಯಿಂದ ಉಪಯೋಗಿಸಲ್ಪಟ್ಟಿದೆ.